## ಉಪಯುಕ್ತ ಸಂದರ್ಶನ

ಚಂದನ ವಾಹಿನಿಯಲ್ಲಿ ಮನೋವೈದ್ಯ ಫಾಲಾಕ್ಷ ಅವರ ಜೊತೆ ನಡೆಸಿದ ಸುದೀರ್ಘ ಸಂದರ್ಶನ ಮಾಹಿತಿ ಪೂರ್ಣವಾಗಿತ್ತು. ಎಲ್ಲ ವರ್ಗದ ವೀಕ್ಷಕರಿಗೂ ಪ್ರಯೋಜನವಾಗಿತ್ತು. ಸಂದರ್ಶಕಿ ದಿವ್ಯಾ ಆಲೂರು ಅವರು ಒಳ್ಳೆಯ ಪ್ರಶ್ನೆಗಳನ್ನು ಕೇಳಿ, ವೀಕ್ಷಕರಿಗೆ ಉಪಯುಕ್ತ ಮಾಹಿತಿಯನ್ನು ನೀಡಲು ನೆರವಾದರು. 'ದೇಹದ ಆರೋಗ್ಯ ಕಾಪಾಡಿದರೆ ಮಾನಸಿಕ ಆರೋಗ್ಯ ಕಾಪಾಡಿದಂತೆ, ಮಾನಸಿಕ ಆರೋಗ್ಯ ಕಾಪಾಡಿದರೆ ದೈಹಿಕ ಆರೋಗ್ಯ ಕಾಪಾಡಿದಂತೆ' ಎಂಬ ಅವರ ಹಿತನುಡಿ ಮಾರ್ಗದರ್ಶಿಯಂತಿತ್ತು.

—ನಾರಾಯಣ ಯಾಜಿ, ಶಿರಾಲಿ

## ಮನಗೆದ್ದ 'ಅನುಬಂಧ'

ಕಲರ್ಸ್‌ನ 'ಅನುಬಂಧ ಅವಾರ್ಡ್' ಕಾರ್ಯಕ್ರಮ ವೀಕ್ಷಕರ ಮನಗೆದ್ದಿದೆ. ಅದು ವರ್ಷದಿಂದ ವರ್ಷಕ್ಕೆ ತನ್ನ ಗುಣಮಟ್ಟವನ್ನು ಹೆಚ್ಚಿಸುತ್ತಿದೆ. ಅದ್ದೂರಿ ಕಾರ್ಯಕ್ರಮದಲ್ಲಿ ಹಾಗೂ ಪ್ರಶಸ್ತಿ ನೀಡುವಲ್ಲಿ ಯಾವೊಂದು ಅಪಸ್ವರ ಕೇಳಿಬರದಿರುವುದು ವಿಶೇಷ.

'ಅನುಬಂಧ'ದಲ್ಲಿ ಕಣ್ಣು ಕೋರೈಸುವ ಮಹಿಳೆಯರ ದಿರಿಸು ಮತ್ತು ಮೇಕಪ್ ನೋಡಿದಾಗ ಇದೇನು ಕಾರ್ಯಕ್ರಮವೋ ಫ್ಯಾಷನ್ ಪರೇಡೋ ಎಂಬ ಸಂದೇಹವೂ ಮೂಡಿತು. ಪುರುಷರು ಎಂದಿನಂತೆ ಸಪ್ಪೆಯಾಗಿ ಕಂಡರು. ನಿರೂಪಕರ ಹದತಪ್ಪದ ಮಾತು ಖುಷಿ ಕೊಟ್ಟಿತು.

—ರಮಾನಂದ ಶರ್ಮಾ, ಬೆಂಗಳೂರು

ವಾರದ ಪತ್ರ

## ಬಿಗ್ ಥ್ಯಾಂಕ್ಸ್ 'ಬಿಗ್ ಬಾಸ್'

ಝೀ ಕನ್ನಡದ 'ಕಮಲಿ' ಧಾರಾವಾಹಿಯ ನಾಯಕಿ ಅಮೂಲ್ಯ ಗೌಡ 'ಬಿಗ್ ಬಾಸ್'ಗೆ ಆಯ್ಕೆಯಾಗಿ ಧಾರಾವಾಹಿಗೆ ಮುಕ್ತಿ ಕೊಟ್ಟಿದ್ದಾರೆ. ಪಾತ್ರಧಾರಿಗಳು ಬದಲಾದರೂ ಹಲವು ವರ್ಷಗಳಿಂದ ಶಾನೇ ಬ್ಯಾಸರ ನೀಡುತ್ತಿದ್ದ ಧಾರಾವಾಹಿಯನ್ನು ಕಡೆಗೂ ಮುಗಿಸಿದ್ದಾರೆ. ಇದರಿಂದ ವೀಕ್ಷಕರಿಗೆ ಖುಷಿಯಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಪ್ರತಿ ಬಾರಿಯೂ ಧಾರಾವಾಹಿಗಳ ನಾಯಕ ಅಥವಾ ನಾಯಕಿಯರನ್ನು ಹೋಲ್ ಸೇಲಾಗಿ 'ಬಿಗ್ ಬಾಸ್'ನಂತಹ ರಿಯಾಲಿಟಿ ಶೋಗಳಿಗೆ ಆಯ್ಕೆಮಾಡಿದರೆ ಧಾರಾವಾಹಿಗಳ ಅನಗತ್ಯ ಎಳೆದಾಟಕ್ಕೆ ಒಂದು ಅಂತ್ಯ ಬರುವುದರಲ್ಲಿ ಅನುಮಾನವಿಲ್ಲ.

—ವಾ. ಮುರಳೀಧರ, ತೀರ್ಥಹಳ್ಳಿ

## ಹಳಬರಿಗೇ ಮಣೆ

ಝೀ ಕನ್ನಡದಲ್ಲಿ 'ಕಾಮಿಡಿ ಕಿಲಾಡಿ'ಗಳು ಶುರುವಾಗಿದೆ. ಇದರಲ್ಲಿನ ಬಹುತೇಕ ಸ್ಪರ್ಧಿಗಳು ಹಿಂದಿನ ಸೀಸನ್‌ನಲ್ಲಿ ಇದ್ದವರೇ ಆಗಿದ್ದಾರೆ. ಹೀಗೇಕೆ? ಹೊಸಬರಿಗೇ ಅವಕಾಶ ನೀಡಬಾರದೇ? ಇದರಿಂದ ಇನ್ನೊಂದಷ್ಟು ಪ್ರತಿಭೆಗಳು ಹೊರಹೊಮ್ಮಲು ಸಾಧ್ಯವಾಗುತ್ತದೆ ಮತ್ತು ಈ ಕಾರ್ಯಕ್ರಮವನ್ನು ನೋಡಲು ಹೆಚ್ಚಿನ ಆಸಕ್ತಿ ಮೂಡುತ್ತದೆ.

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ಛೇ! ಮುಗಿದೇಹೋಯ್ತು...

ಕಲರ್ಸ್ ಕನ್ನಡದ 'ಮಂಗಳಗೌರಿ ಮದುವೆ'ಯ ಅಂತಿಮ ಅಧ್ಯಾಯ ಎಂದು ಪ್ರಸಾರ ಮಾಡಿ ಧಾರಾವಾಹಿಯನ್ನು ಅಂತ್ಯಗೊಳಿಸಿದ್ದು ಬೇಸರ ಆಯಿತು. ಛೇ ಇಷ್ಟು ಬೇಗ ಮುಗಿದುಹೋಯಿತೇ? ಇದರ ಅನೇಕ ದೃಶ್ಯಗಳನ್ನು, ಅಪಸವ್ಯಗಳನ್ನು ಆಡಿಕೊಳ್ಳುತ್ತಾ ಎಂಜಾಯ್ ಮಾಡುತ್ತಿದ್ದೆವು. ಕಿಡ್ನಾಪ್, ಆಸ್ಪತ್ರೆ ರೋಗಿಯಾಗಿ ನರಳಾಟದಂತಹ ಪರಿಸ್ಥಿತಿಯಲ್ಲೂ ಲಕಲಕ ತಾಜಾಮಲ್ಲಿಗೆ ಮುಡಿದಿದ್ದ ಮಂಗಳಗೌರಿ ಜಡೆ, ಮಂಗಳಗೌರಿ ರೌಡಿಗಳೊಂದಿಗೆ ಏಕಾಂಗಿಯಾಗಿ ಹೋರಾಡುವುದು, ಗಡ್ಡಬಿಟ್ಟ ಸಪ್ಪೆಮುಖದ ಪೊಲೀಸಪ್ಪನ ದಡ್ಡತನ—ಎಲ್ಲವೂ ನಿಂತುಹೋಯಿತೇ? ಮತ್ತಷ್ಟು ವರ್ಷಗಳು ಎಳೆಯಬಹುದಾದ ಸಾಧ್ಯತೆ ಇತ್ತು.

—ಪತ್ತಂಗಿ ಎಸ್. ಮುರಳಿ, ಬೆಂಗಳೂರು

## ಸಂಭ್ರಮದ ಊಟ

ಕಲರ್ಸ್ ಕನ್ನಡದ 'ಪುಟ್ಟ ಗೌರಿ ಮತ್ತು ಮಂಗಳಗೌರಿ ಮದುವೆ' ಹತ್ತು ವರ್ಷದ ಸುದೀರ್ಘ ಪಯಣವನ್ನು ಮುಗಿಸಿರಬಹುದು. ಅದಕ್ಕೆ ಹಲವು ಪ್ರಶಸ್ತಿ ಪ್ರಶಂಸೆ ಬಂದಿರಬಹುದು. ಹಲವು ಕಲಾವಿದರಿಗೆ ಕೀರ್ತಿ ಕೊಟ್ಟಿರಬಹುದು. ಜನರು ಈ ಚಿತ್ರಹಿಂಸೆಯಿಂದ ಪಾರಾದರೂ ಅಂತಾನೇ ಹೇಳಬಹುದು.

ಅ ಕಾರಕ್ಕೂ ಹ ಕಾರಕ್ಕೂ ವ್ಯತ್ಯಾಸವಿಲ್ಲ. ಅಲ್ಪಪ್ರಾಣ–ಮಹಾಪ್ರಾಣಗಳಲ್ಲಿಯೂ ತಪ್ಪನ್ನು ಮೇಲಿಂದ ಮೇಲೆ ಮಾಡುತ್ತಿದ್ದರು. ಪೊಲೀಸ್, ವೈದ್ಯರು, ಲಾಯರ್ ಪಾತ್ರಗಳನ್ನು ವೃತ್ತಿ ಗೌರವಕ್ಕೆ ತಕ್ಕಂತೆ ಪೋಷಣೆ ಮಾಡಲಿಲ್ಲ. ಸಂತೂ ಮುಗಿಸಿದ್ದಕ್ಕೆ ನಮ್ಮ ಮನೆಯಲ್ಲಿ ಸಂಭ್ರಮ ಅಡುಗೆ.

—ಉಷಾ ಮೂರ್ತಿ, ಕೋರಮಂಗಲ



## 'ರಾಮಾಚಾರಿ'ಯ ದಡ್ಡತನ

ಕಲರ್ಸ್ ಕನ್ನಡದ 'ರಾಮಾಚಾರಿ' ಧಾರಾವಾಹಿಯ ನಾಯಕ ಸಾಫ್ಟ್‌ವೇರ್ ಎಂಜಿನಿಯರ್. ಆತ ಮಾಡಿದ ಪ್ರಾಜೆಕ್ಟ್ ಜೀವನ್ಮರಣದ ಪ್ರಶ್ನೆಯಾಗಿತ್ತು. ಅಷ್ಟು ಅಮೂಲ್ಯವಾದ ಕೆಲಸವನ್ನು ಬ್ಯಾಕ್‌ಅಪ್ ಮಾಡಿಕೊಳ್ಳದೇ ಇದ್ದದ್ದು ಪರಮಾಶ್ಚರ್ಯ. ಎಂಜಿನಿಯರ್ ಹೊಸಬನಾಗಿದ್ದರೂ ಒಂದು ಸಿ.ಡಿ.ಯಲ್ಲೋ ಅಥವಾ ಪೆನ್ ಡ್ರೈವ್‌ನಲ್ಲೋ ಅದರ ಬ್ಯಾಕ್‌ಅಪ್ ಇಟ್ಟುಕೊಳ್ಳುವುದು ಸಹಜ ತಾನೆ?

—ಜಿ. ಮೃತ್ಯುಂಜಯ, ಬೆಂಗಳೂರು

## ಮಾಧ್ಯಮದಲ್ಲಿ ದಸರಾ ಮೆರುಗು

ನಾಡಹಬ್ಬ ದಸರಾಕ್ಕೆ ತೆರೆ ಬಿದ್ದಿದೆ. ವಿಜಯದಶಮಿಯ ದಿನ ದಸರಾ ವೈಭವವನ್ನು ಕಣ್ಣು ತುಂಬಿಕೊಳ್ಳಲು ಅನುವು ಮಾಡಿಕೊಟ್ಟ 'ಚಂದನ' ವಾಹಿನಿಗೆ ಧನ್ಯವಾದಗಳು. ಜಂಬೂಸವಾರಿಯ ಸೊಬಗು, ಸಾಂಸ್ಕೃತಿಕ ಕಲಾತಂಡಗಳು ಮೆರುಗಿನಿಂದ ಆಕರ್ಷಿಸಿದವು. ಬನ್ನಿಮಂಟಪದ ಕಾರ್ಯಕ್ರಮಗಳು ಬಹಳ ಚೆನ್ನಾಗಿತ್ತು.

ಪೊಲೀಸ್ ಇಲಾಖೆಯ ಪಂಜಿನ ಕವಾಯತು ಶ್ಲಾಘನೀಯ. 'Well Come', 'Happy Dasara' ವಿನ್ಯಾಸದ ಜೊತೆಗೆ ಕನ್ನಡದಲ್ಲಿ 'ನಮ್ಮ ಮೈಸೂರು ನಮ್ಮ ಹೆಮ್ಮೆ' ಅತ್ಯಾಕರ್ಷಕವಾಗಿತ್ತು. ಅತಿ ಸುಂದರವಾದ ಈ ಕಾರ್ಯಕ್ರಮಕ್ಕಾಗಿ ಅವರಿಗೆ ನಮ್ಮ ಸೆಲ್ಯೂಟ್.

—ವೀಣಾ ಮಂಜಪ್ಪ, ಬೆಂಗಳೂರು

## ನವರಾತ್ರಿ ಬೊಂಬಾಟ್ ಭೋಜನ

ದಸರಾ ಸಮಯದ 'ಬೊಂಬಾಟ್ ಭೋಜನ' ಕಾರ್ಯಕ್ರಮ ಸೊಗಸಾಗಿ ಮೂಡಿಬಂತು. ಗೌರಿ ಅಮ್ಮ ಹೇಳುತ್ತಿದ್ದ ದೇವಿಯ ಮಹಾತ್ಮೆಯ ಕಥೆ ಕುತೂಹಲಕಾರಿಯಾಗಿತ್ತು. ಆಯಾಯ ದಿನದ ನೈವೇದ್ಯ, ಪ್ರಸಾದದ ಬಗೆಗೂ ತಿಳಿಸಿದ್ದು ಉಪಯುಕ್ತವಾಗಿತ್ತು. ನವದುರ್ಗೆಯರ ರೂಪದಲ್ಲಿ ಬಾಲಕಿಯರನ್ನು ನಡೆಸಿಕೊಂಡಿದ್ದು ಪ್ರತ್ಯಕ್ಷವಾಗಿ ದೇವಿಯರನ್ನೇ ನೋಡಿದಷ್ಟು ಖುಷಿ ಕೊಟ್ಟಿತು. ಶ್ರೀರಾಮ್ ಬಹಳ ಚೂಟಿಯಾದ ಬಾಲಕಿ. ಆಕೆ ಮ್ಯಾಜಿಕ್ ಮಾಡಿದ್ದು, ಹಾಡಿದ್ದು ಹಾಗೂ ಕಥೆ ಹೇಳಿದ್ದು ಎಲ್ಲವೂ ಬಹಳ ಮುದ್ದಾಗಿತ್ತು.

—ಕೆ.ಎಸ್. ಸವಿತ, ಬೆಂಗಳೂರು